ಓ.ಎಸ್.ನಂ.236-2019

ಪಿ.ಡಬ್ಲು-೧

ದಿ: 15-12-2025 ರಂದು 1 ನೇ ವಾದಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು**: 2 ಮತ್ತು 3ನೇ ಪ್ರತಿವಾದಿಗಳ ಪರ ಶ್ರೀಯುತ ಆರ್.ಕೆ ವಕೀಲರಿಂದ.

ನನ್ನ ತಂದೆಯ ಹೆಸರು ವೆಂಕಟರಮಣಪ್ಪ ಎಂದರೆ ಸರಿ. ಸದರಿ ವೆಂಕಟರಮಣಪ್ಪರವರ ತಂದೆ ಹೆಸರು ತಿಪ್ಪೆ ಗೌಡ ಯಾನೆ ತಿಪ್ಪಣ್ಣ ಎಂದರೆ ಸರಿ. ನನ್ನ ತಂದೆಗೆ ಕೃಷ್ಣಪ್ಪ, ಶಂಕರಪ್ಪ ಮತ್ತು ಹೆಚ್.ವಿ. ನಾರಾಯಣಸ್ವಾಮಿ ಎನ್ನುವ ಮೂರು ಜನ ಮಕ್ಕಳು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಂದೆಗೆ ಇಬ್ಬರು ಹೆಂಡತಿಯರು ಇದ್ದು ಮತ್ತು ಒಟ್ಟು ಆರು ಜನ ಮಕ್ಕಳಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಸೊಣ್ಣಪ್ಪ ಯಾನೆ ಸೊಣ್ಣೆ ಗೌಡ ಎನ್ನುವ ಸಹೋದರ ಇದ್ದ ಎಂದರೆ ಸರಿ. ಸದರಿ ಸೊಣ್ಣೆ ಗೌಡ ೨ನೇ ಪ್ರತಿವಾದಿಯ ತಂದೆ ಎಂದರೆ ಸರಿ. ದಿ: 15.11.1983 ರಂದು ಸದರಿ ಸೊಣ್ಣೆ ಗೌಡ ರವರು ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸೊಣ್ಣೆ ಗೌಡ ಮತ್ತು ನನ್ನ ತಂದೆ ತಿಪ್ಪಣ್ಣ ರವರ ಮಕ್ಕಳು ಎಂದರೆ ಸರಿ. ಸದರಿ ಸೊಣ್ಣೆ ಗೌಡ ರವರಿಗೆ ಮೂರು ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ಸದರಿ ಸೊಣ್ಣೆ ಗೌಡ ರವರ ಗಂಡು ಮಕ್ಕಳ ಹೆಸರು ತಿಪ್ಪಣ್ಣ, ಕೃಷ್ಣಪ್ಪ ಮತ್ತು ಶಂಕರಪ್ಪ. ಸದರಿ ಸೊಣ್ಣೆಗೌಡ ರವರ ಮಗನಾದ ತಿಪ್ಪಣ್ಣ ರವರ ಮೇಲೆ ಪ್ರಸ್ತುತ ದಾವೆಯನ್ನು ದಾಖಲಿಸಿರುತ್ತೇನೆ ಮತ್ತು ಸದರಿ ತಿಪ್ಪಣ್ಣ ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿ ಸೊಣ್ಣೆ ಗೌಡ ರವರ ಇಬ್ಬರು ಹೆಣ್ಣು ಮಕ್ಕಳ ಹೆಸರು ರಾಜಮ್ಮ ಮತ್ತು ರಾಮಕ್ಕ ಎಂದರೆ ಸರಿ. ಸದರಿ ಸೊಣ್ಣೆಗೌಡರವರ ಇಬ್ಬರ ಹೆಣ್ಣು ಮಕ್ಕಳ ಪೈಕಿ ರಾಮಕ್ಕ ಜೀವಂತ ಇರುವುದಿಲ್ಲ ಎಂದರೆ ಸರಿ. ೩ನೇ ಪ್ರತಿವಾದಿ ೨ನೇ ಪ್ರತಿವಾದಿಯ ಮಗ ಎಂದರೆ ಸರಿ.

2. 1942 ನೇ ಸಾಲಿನಲ್ಲಿ ಸೊಣ್ಣೆ ಗೌಡ ರವರು ದಾವಾ ಆಸ್ತಿ ಸರ್ವೆ ನಂಬರ್ ನಲ್ಲಿ 30 ಗುಂಟೆ ಜಮೀನನ್ನು ಪಟೇಲ್ ಮುದ್ದಪ್ಪರವರಿಂದ ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 133 ವಿಸ್ತೀರ್ಣ 30 ಗುಂಟೆ ಜಮೀನನ್ನು ಮೂಲತ: ಯಾರು ಖರೀದಿಸಿರುತ್ತಾರೆ ಎಂದು ತಿಳಿದಿದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆ ಮತ್ತು ಸೊಣ್ಣೆ ಗೌಡ ರವರು ಒಟ್ಟಿಗೆ ವಾಸವಾಗಿದ್ದು ಸೊಣ್ಣೆ ಗೌಡ ರವರು ಖರೀದಿಸಿರುತ್ತಾರೆ ತದನಂತರ ನನ್ನ ತಂದೆಗೆ ಭಾಗ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ಸೊಣ್ಣೆ ಗೌಡ ರವರು ಸರ್ವೆ ನಂಬರ್ 133 ವಿಸ್ತೀರ್ಣ 30 ಗುಂಟೆ ಜಮೀನಿನಲ್ಲಿ ನಿಮ್ಮ ತಂದೆಗೆ ಭಾಗ ನೀಡಿದ್ದರು ಎನ್ನುವ ಕುರಿತು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಮತ್ತು ಸದರಿ ದಾಖಲೆ ನಿಪಿ.1 ಎಂದು ನುಡಿಯುತ್ತಾರೆ. ನಿಪಿ.1 ಭಾಗದ ದಾಖಲೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.1 ದಾಖಲೆಯು 1988-89 ನೇ ಸಾಲಿನ ಮ್ಯುಟೇಷನ್ ವಹಿ ಆಗಿರುತ್ತದೆ ಎಂದರೆ ಸಾಕ್ಷಿಯು ಸೊಣ್ಣೆ ಗೌಡ ರವರ ಮಕ್ಕಳು ವಿಭಾಗ ಮಾಡಿಕೊಟ್ಟು ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.1 ದಾಖಲೆ ಸಮಯದಲ್ಲಿ ಸೊಣ್ಣೆ ಗೌಡ ರವರು ಜೀವಂತ ಇರಲಿಲ್ಲ ಎಂದರೆ ಸರಿ.

3. ನಿಪಿ.1 ದಾಖಲೆಯು ನನ್ನ ಮತ್ತು ನನ್ನ ಸಹೋದರರ ನಡುವೆ ಆದಂತಹ ದಾಖಲೆ ಆಗಿರುತ್ತದೆ ಮತ್ತು ನಿಪಿ.1 ರಲ್ಲಿ ಸೊಣ್ಣೆ ಗೌಡ ರವರ ಮಕ್ಕಳು ಭಾಗವಹಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಬರೆದಿರುವ ಅಂಶಗಳು ಸರಿ ಇರುತ್ತದೆ. ನಿಪಿ.1 ರಲ್ಲಿ ಸೊಣ್ಣೆ ಗೌಡ ರವರ ಮಕ್ಕಳ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 133 ವಿಸ್ತೀರ್ಣ 30 ಗುಂಟೆ ಜಮೀನು ಸೊಣ್ಣೆ ಗೌಡ ರವರು ಖರೀದಿಸಿದ ಜಮೀನು ಆಗಿದ್ದು ಮತ್ತು ನನ್ನ ತಂದೆ ರೆವಿನ್ಯೂ ಅಧೀಕಾರಿಗಳೊಂದಿಗೆ ಸೇರಿಕೊಂಡು ಸದರಿ ಜಮೀನಿನ ಪಹಣಿ ಪತ್ರಿಕೆಯ 9 ಮತ್ತು 12 ನೇ ಕಾಲಂ ನಲ್ಲಿ ತಮ್ಮ ಹೆಸರನ್ನು ಸೊಣ್ಣೆ ಗೌಡ ರವರಿಗೆ ತಿಳಿಯದಂತೆ ನಮೂದಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವುದೇ ಒಂದು ಪಹಣಿ ಪತ್ರಿಕೆಯ ಕಲಂ 9 ಮತ್ತು 12 ರಲ್ಲಿ ಹೆಸರನ್ನು ನಮೂದಿಸುವ ಪೂರ್ವದಲ್ಲಿ ಆದೇಶವಾಗಬೇಕು ಮತ್ತು ದಾವಾ

ಆಸ್ತಿಯ ಪಹಣಿ ಪತ್ರಿಕೆಯಲ್ಲಿ ನಿಮ್ಮ ತಂದೆಯ ಹೆಸರನ್ನು ನಮೂದಿಸುವ ಸಮಯದಲ್ಲಿ ಆ ರೀತಿ ಯಾವುದೆ ಆದೇಶ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.6 ಮತ್ತು 7 ರಲ್ಲಿ ನಿಮ್ಮ ತಂದೆಯ ಹೆಸರನ್ನು ಯಾವ ಆಧಾರದ ಮೇರೆಗೆ ನಮೂದಿಸಲಾಗಿರುತ್ತದೆ ಎನ್ನುವ ವಿವರ ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಈ ಹಿಂದೆ ಊರಿನ ಶ್ಯಾನುಭೋಗರು ಊರಿನ ಪಂಚಾಯ್ತಿಯ ನಾಲ್ಕು ಜನರ ಹೇಳಿಕೆಗಳನ್ನು ಪಡೆದುಕೊಂಡು ನಮ್ಮ ತಂದೆಯ ಹೆಸರನ್ನು ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ. 1969-70 ನೇ ಸಾಲಿನಲ್ಲಿ ಶ್ಯಾನು ಭೋಗರವರಿಗೆ ಕೃಷಿ ಜಮೀಣಿನ ಪಹಣಿ ಪತ್ರಿಕೆಯಲ್ಲಿ ಹೆಸರು ನಮೂದಿಸುವ ಯಾವುದೇ ಅಧೀಕಾರ ಇರಲಿಲ್ಲ ಎಂದರೆ ಸಾಕ್ಷಿಯು ಸೆಕರೇಟರಿಗೆ ಖಾತೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ಶ್ಯಾನುಭೋಗರು ಪಂಚಾಯ್ತಿನ ನಾಲ್ಕು ಜನರ ಹೇಳಿಕೆಗಳನ್ನು ಪಡೆದುಕೊಂಡು ಪಹಣಿ ಪತ್ರಿಕೆಯಲ್ಲಿ ಹೆಸರು ನಮೂದಿಸಿದ್ದರು ಎನ್ನುವ ಸದರಿ ನಾಲ್ಕು ಜನರ ಹೇಳಿಕೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ಮುಂದಿನ ಸುನಾವಣೆಯಲ್ಲಿ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

**<u>ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.